655(19) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರಾಜ್ಯಮಟ್ಟದ ಸಹಕಾರಿ ಸಂಘಗಳು ಯಾವುವು;

ಆ) ಈ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಅಥವಾ ಹಾನಿ ಎಷ್ಟು;

ಇ) ಈ ಸಂಘಗಳು 31–3–2004ಕ್ಕೆ ಗಳಿಸಿದ ಒಟ್ಟು ಲಾಭ ಅಥವಾ ಹಾನಿ ಎಷ್ಟು;

ಈ) ಈ ಸಂಘಗಳಿಗೆ ಸರ್ಕಾರ ಕೊಟ್ಟಿರುವ ಧನ ಸಹಾಯ 31–3–2004ಕ್ಕೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 81 ರಾಜ್ಯಮಟ್ಟದ ಸಹಕಾರಿ ಸಂಘಗಳು ಇರುತ್ತದೆ. ಪಟ್ಟಿಯನ್ನು ಲಗತ್ತಿಸಿದೆ.

ಆ) ಈ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಅಥವಾ ಹಾನಿ ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ವರ್ಷ	ಲಾಭ	ಹಾನಿ
2001–02	3974.61	2866.26
2002–03	820.31	7300.05
2003–04	1936.49	2320.03

ಇ) ಈ ಸಂಘಗಳು ದಿನಾಂಕ 31–3–2004ಕ್ಕೆ ಒಟ್ಟು ರೂ. 9759.51ಲಕ್ಷ ಲಾಭಗಳಿಸಿವೆ ಮತ್ತು ರೂ.679.73 ಲಕ್ಷಗಳ ಹಾನಿ ಅನುಭವಿಸಿದೆ.

ಈ) ಈ ಸಂಘಗಳಿಗೆ ಸರ್ಕಾರವು ದಿನಾಂಕ 31–3–2004ಕ್ಕೆ ರೂ. 3274.57 ಲಕ್ಷಗಳ ಧನಸಹಾಯ ನೀಡಿದೆ.

656(21) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಜಿಲ್ಲಾವಾರು ಸ್ವಶಕ್ತಿ ಮಹಿಳಾ ಗುಂಪುಗಳ ಸಂಖ್ಯೆ ಎಷ್ಟು;

ಆ) ಪ್ರತಿ ಗುಂಪುಗಳಿಗೆ ಸರ್ಕಾರ ಕೊಟ್ಟಿರುವ ಸುತ್ತು ನಿಧಿ ಧನ ಸಹಾಯವೆಷ್ಟು;

ಇ) ಜಿಲ್ಲಾವಾರು ಈ ಸಂಘಗಳಲ್ಲಿ ಸಂಗ್ರಹಿಸಿರುವ ಮೊತ್ತವೆಷ್ಟು;

ಈ) ಜಿಲ್ಲಾವಾರು ಈ ಸಂಘಗಳ ಸದಸ್ಯರಿಗೆ ಹಾಗೂ ಇತರರಿಗೆ ಕೊಟ್ಟಿರುವ ಸಾಲದ ಮೊತ್ತವೆಷ್ಟು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಸ್ವಶಕ್ತಿ ಯೋಜನೆಯಡಿ ರಚಿಸಲಾದ ಒಟ್ಟು ಗುಂಪುಗಳ ಸಂಖ್ಯೆ 2114 ಜಿಲ್ಲಾವಾರು ಗುಂಪುಗಳ ಸಂಖ್ಯೆ ಈ ಕೆಳಗಿನಂತಿದೆ.

1.	ಕೋಲಾರ	349
2.	ಚಿತ್ರದುರ್ಗ	331
3.	ತುಮಕೂರು	349
4.	ಬಳ್ಳಾರಿ	299
5.	ಕೊಪ್ಪಳ	298
6.	ರಾಯಚೂರು	142
7.	ಗುಲ್ಬರ್ಗಾ	346
	ಒಟ್ಟು	2114

ಆ) ಕೇಂದ್ರ ಸರ್ಕಾರದ ಈ ಯೋಜನೆಯಡಿ ಸುತ್ತುನಿಧಿ ನೀಡುವ ಅವಕಾಶವಿರುವುದಿಲ್ಲ.

ಇ) ಡಿಸೆಂಬರ್ 2004ರಲ್ಲಿದ್ದಂತೆ ಸ್ವಸಹಾಯ ಗುಂಪುಗಳು ಮಾಡಿರುವ ಉಳಿತಾಯದ ಮೊತ್ತ ಮತ್ತು ಸಾಮಾನ್ಯ ನಿಧಿ (ಜಿಲ್ಲಾವಾರು)

1.	ಕೋಲಾರ	104.14 ಲಕ್ಷಗಳು
2.	ಚಿತ್ರದುರ್ಗ	111.75 ಲಕ್ಷಗಳು
3.	ತುಮಕೂರು	123.86 ಲಕ್ಷಗಳು
4.	ಬಳ್ಳಾರಿ	100.78 ಲಕ್ಷಗಳು
5.	ಕೊಪ್ಪಳ	69.80 ಲಕ್ಷಗಳು
6.	ರಾಯಚೂರು	17.54 ಲಕ್ಷಗಳು
7.	ಗುಲ್ಬರ್ಗಾ	100.88 ಲಕ್ಷಗಳು
	ಒಟ್ಟು	**628.75 ಲಕ್ಷಗಳು**

ಈ) ಆಂತರಿಕ ಸಾಲ ಬ್ಯಾಂಕ್ ಸಂಪರ್ಕ

		(ರೂ. ಲಕ್ಷಗಳಲ್ಲಿ)	
1.	ಕೋಲಾರ	349	264
2.	ಚಿತ್ರದುರ್ಗ	331	283
3.	ತುಮಕೂರು	349	343
4.	ಬಳ್ಳಾರಿ	299	258
5.	ಕೊಪ್ಪಳ	298	221
6.	ರಾಯಚೂರು	137	78
7.	ಗುಲ್ಬರ್ಗಾ	346	269
	ಒಟ್ಟು	**2109**	**1716**